

## ಅಮರ ಪ್ರೀತಿ!

ಪತ್ನಿ: ನಾನು ಸತ್ತು ಹೋದರೆ ನೀವೇನು ಮಾಡುವಿರಿ?

ಪತಿ: ನಾನೂ ಸತ್ತು ಹೋಗುತ್ತೇನೆ.

ಪತ್ನಿ: ಯಾಕ್ರೀ, ಈಗಲೂ ಅಷ್ಟೊಂದು ಪ್ರೀತಿಸ್ತೀರಾ ನನ್ನ....?

ಪತಿ: ಇತ್ತೀಚೆಗೆ ನನ್ನ ಹೃದಯ ತುಂಬಾ ನಾಜೂಕಾಗಿದೆಯೆಂದು ಡಾಕ್ಟರ್ ತಿಳಿಸಿದ್ದಾರೆ. ನೀನು ಸತ್ತಾಗ ಆಗುವ ಸಂತೋಷದಲ್ಲಿ ನಿಶ್ಚಿತವಾಗಿಯೂ ನನಗೆ ಹೃದಯಾಘಾತವಾಗುತ್ತದೆ!

★★★



## ಪ್ರಾಮಾಣಿಕ ಕೋರಿಕೆ!

ಗೋಪಿ 98.3 ಎಫ್.ಎಮ್. ರೇಡಿಯೋ ನಿಲಯಕ್ಕೆ ಫೋನಾಯಿಸಿ ಅರುಹಿದ, 'ನನಗೆ ಎಮ್.ಜಿ. ರಸ್ತೆಯಲ್ಲೊಂದು ಪರ್ಸ್ ದೊರಕಿದೆ. ಅದರೊಳಗೆ ರೂ. 10 ಸಾವಿರ ನಗದು, 1 ಕ್ರೆಡಿಟ್ ಕಾರ್ಡ್ ಮತ್ತು ಗೀತಾ ಮಿಶ್ರಾ ಹೆಸರಿನ ಗುರುತು ಚೀಟಿ ಲಭಿಸಿದೆ.'

ರೇಡಿಯೋ ಜಾಕಿ: ವ್ಹಾವ್... ನೀವು ಅದೆಷ್ಟು ಪ್ರಾಮಾಣಿಕರಾಗಿರುವಿರಿ... ನೀವು ಆ ಪರ್ಸನ್ನು ಗೀತಾ ಮಿಶ್ರಾರವರಿಗೆ ಹಿಂತಿರುಗಿಸ ಬಯಸುತ್ತಿದ್ದೀರಾ?

ಗೋಪಿ: ಇಲ್ಲ, ಇಲ್ಲ... ನಾನು ಗೀತಾ ಮಿಶ್ರಾರವರಿಗಾಗಿ ಶೋಕ ಗೀತೆಯೊಂದನ್ನು ಪ್ರಸಾರ ಮಾಡಬೇಕಾಗಿ ಕೋರುತ್ತಿದ್ದೇನೆ!

★★★

## ಏಟು-ಎದಿರೇಟು!

ಲಲನೆಯೋರ್ವಳು ತನ್ನ ಬಾಯ್‌ಫ್ರೆಂಡ್ ಜೊತೆ ಸುತ್ತಾಡುತ್ತಿದ್ದಳು. ಅಷ್ಟರಲ್ಲಿ ಆಕೆಯ ಪತಿ ಆಗಮಿಸಿ ಬಾಯ್‌ಫ್ರೆಂಡ್‌ಗೆ ಹೊಡೆಯಲಾರಂಭಿಸಿದ.

ಲಲನೆ: ಚೆನ್ನಾಗಿ ಹೊಡೆಯಿರಿ ಅವನಿಗೆ... ತನ್ನ ಪತ್ನಿಯನ್ನು ಬಿಟ್ಟು ಬೇರೆಯವರ ಪತ್ನಿಯನ್ನು ಸುತ್ತಾಡಿಸಲು ಬಂದಿದ್ದಾನೆ ನೋಡ್ರೀ...!

ರೋಷವುಕ್ಕಿ ಬಾಯ್ ಫ್ರೆಂಡ್ ಆಕೆಯ ಪತಿಗೆ ಯದ್ವಾ ತದ್ವಾ ಚಚ್ಚಲಾರಂಭಿಸಿದ...

ಲಲನೆ: ಇನ್ನೂ ಚೆನ್ನಾಗಿ ಹೊಡಿ ಅವರಿಗೆ; ಸ್ವತಃ ಸುತ್ತಾಡಿಸುವುದೂ ಇಲ್ಲ; ಬೇರೆಯವರು ಸುತ್ತಾಡಿಸಲು ಬಿಡುವುದೂ ಇಲ್ಲ...!!

★★★

## ಕಾಡಿನಲ್ಲಿ

ಹುಲಿ: ಈ ಡಿಸ್ಕವರಿ ಮತ್ತು ಅನಿಮಲ್ ಪ್ಲಾನೆಟ್ ಚಾನೆಲ್‌ನವರು ತುಂಬಾ ತೊಂದರೆ ಕೊಡುತ್ತಿದ್ದಾರೆ.

ಕೋತಿ: ಏಕೆ, ಏನಾಯಿತು?

ಹುಲಿ: ಪ್ರತಿ ದಿನ ಹಗಲಿರುಳೆನ್ನದೆ ಕ್ಯಾಮರಾ ಇಟ್ಟು ಚಿತ್ರೀಕರಣ ನಡೆಸುತ್ತಾ ನಮ್ಮ ಖಾಸಗಿ ಜೀವನವನ್ನು ಹಾಳು ಮಾಡಿಬಿಡುತ್ತಾರೆ, ಮೇಲಾಗಿ ವಾಹಿನಿಗಳಲ್ಲಿ, 'ವನ್ಯ ಮೃಗಗಳ ಸಂತತಿ ನಾಶವಾಗುತ್ತಿದೆ' ಎಂದು ಸೋಗಲಾಡಿತನದ ಮಾತನ್ನಾಡುತ್ತಾರೆ...!

★★★

## ಆಶ್ಚರ್ಯ

ಪತ್ನಿ: ನಿಮ್ಮ ಷರ್ಟನಲ್ಲಿ ಲಿಪ್‌ಸ್ಟಿಕ್ಕಿನ ಗುರುತು ಎಲ್ಲಿಂದ ಬಂತು, ನಿಜ ಹೇಳಿ?

ಪತಿ: ಇದು ಹೇಗೆ ಬಂತು ಎಂದು ನನಗೂ ಆಶ್ಚರ್ಯವಾಗುತ್ತಿದೆ ಕಣೆ; ನಿಜಕ್ಕೂ ಆಗ ನಾನು ಷರ್ಟ್ ತೆಗೆದಿರಿಸಿದ್ದೆ!

(ಸಂ) ರಮಣ್‌ಶೆಟ್ಟಿ ರೆಂಜಾಳ್, ಮುಂಬೈ



